**All India Radio: Bangalore**
**National Bulletin In Kannada**
**03.12.2025  7.35 a.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**03.12.2025  7.35 a.m.**

**<>><><*><><<>**

ಮುಖ್ಯಾಂಶಗಳು

೧.	**ಚುನಾವಣೆ ಸುಧಾರಣೆಗಳ ಕುರಿತು ಇದೇ ೯ ಮತ್ತು ೧೦ ರಂದು ಲೋಕಸಭೆಯಲ್ಲಿ ೧೦ ಗಂಟೆಗಳ ಚರ್ಚೆಗೆ ನಿರ್ಧಾರ**

೨.	**ತಿರುವನಂತಪುರಂನಲ್ಲಿಂದು ನೌಕಾಪಡೆ ಪ್ರದರ್ಶನದಲ್ಲಿ ಭಾಗಿಯಾಗಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು**

೩.	**ಪ್ರಧಾನಮಂತ್ರಿ ಕಚೇರಿಯನ್ನು ಸೇವಾ ತೀರ್ಥ ಎಂದು ಮರು ನಾಮಕರಣ; ರಾಜಭವನ, ರಾಜನಿವಾಸಗಳ ಹೆಸರಿನಲ್ಲೂ ಬದಲಾವಣೆ**

೪.	**ಎಫ್‌ಐಎಚ್ ಕಿರಿಯರ ಪುರುಷರ ಹಾಕಿ ವಿಶ್ವಕಪ್; ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟ ಭಾರತ**

**<>><><*><><<>**

ಸಂಸತ್ತಿನಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ನಡುವಿನ ಬಿಕ್ಕಟ್ಟು ಬಗೆಹರಿದಿದ್ದು, ಉಭಯ ಪಕ್ಷಗಳಲ್ಲಿ ರಾಷ್ಟ್ರೀಯ ಗೀತೆ ವಂದೇ ಮಾತರಂ ಹಾಗೂ ಚುನಾವಣಾ ಸುಧಾರಣೆಗಳ ಕುರಿತು ಚರ್ಚೆ ನಡೆಸಲು ಒಮ್ಮತ ವ್ಯಕ್ತವಾಗಿದೆ.  ಎರಡು ದಿನಗಳ ಅಡೆತಡೆಗಳ ನಂತರ, ಲೋಕಸಭಾಧ್ಯಕ್ಷ ಓಂ ಬಿರ್ಲಾ ಸದನದ ನಾಯಕರೊಂದಿಗೆ ವ್ಯವಹಾರ ಸಲಹಾ ಸಮಿತಿ ಸಭೆ ನಡೆಸಿದರು, ಈ ವೇಳೆ ಇದೇ ೯ ಮತ್ತು ೧೦ ರಂದು ಸಂಸತ್ತಿನ ಕೆಳಮನೆಯಲ್ಲಿ ಚುನಾವಣಾ ಸುಧಾರಣೆಗಳ ಕುರಿತು ೧೦ ಗಂಟೆಗಳ ಕಾಲ ಚರ್ಚೆ ನಡೆಸಲಾಗುವುದು ಎಂದು ನಿರ್ಧರಿಸಲಾಯಿತು.  ಇದೇ ೮ ರಂದು ಮಧ್ಯಾಹ್ನ ೧೨ ಗಂಟೆಯಿಂದ ವಂದೇ ಮಾತರಂನ ೧೫೦ನೇ ವಾರ್ಷಿಕೋತ್ಸವದ ಕುರಿತು ಚರ್ಚೆ ನಡೆಯಲಿದೆ ಎಂದು ಸಭೆಯಲ್ಲಿ ನಿರ್ಧರಿಸಲಾಯಿತು. ಭಾರತದ ರಾಷ್ಟ್ರೀಯ ಗೀತೆಯ ೧೫೦ನೇ ವಾರ್ಷಿಕೋತ್ಸವದ ಕುರಿತು ವಿಶೇಷ ಚರ್ಚೆಯನ್ನು ಪ್ರಧಾನಿ ನರೇಂದ್ರ ಮೋದಿ ಪ್ರಾರಂಭಿಸುವ ಸಾಧ್ಯತೆಯಿದೆ.  ೯ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ ಕುರಿತು ಚರ್ಚೆಗೆ ಒತ್ತಾಯಿಸಿ ವಿರೋಧ ಪಕ್ಷದ ಸಂಸದರು ನಿರಂತರವಾಗಿ ಘೋಷಣೆಗಳನ್ನು ಕೂಗುತ್ತಿದ್ದ ನಡುವೆ, ಸಂಸತ್ತು ಹಲವಾರು ಬಾರಿ ಮುಂದೂಡಿಕೆಗಳನ್ನು ಎದುರಿಸಿದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಸಂಸದೀಯ ಪ್ರಜಾಪ್ರಭುತ್ವಕ್ಕೆ ಚುನಾವಣಾ ಪ್ರಕ್ರಿಯೆ ಬಹಳ ಮುಖ್ಯವಾಗಿದೆ. ಆದ್ದರಿಂದ, ಅಂತಿಮವಾಗಿ, ಎಲ್ಲರೂ ಚರ್ಚೆಗೆ ಒಪ್ಪಿಕೊಂಡಿದ್ದಾರೆ. ಚುನಾವಣಾ ಆಯೋಗದ ಸುಧಾರಣೆಯು ಸರ್ಕಾರವು ನಡೆಸುವ ಮತ್ತು ಸಂಸತ್ತಿನಲ್ಲಿ ಚರ್ಚಿಸುವ ಒಂದು ದೊಡ್ಡ ವಿಷಯವಾಗಿದೆ ಎಂದು ಹೇಳಿದರು. ಎಸ್‌ಐಆರ್ ಭಾರತದ ಚುನಾವಣಾ ಆಯೋಗವು ನಿರ್ಧರಿಸಿದ ಆಡಳಿತಾತ್ಮಕ ವಿಷಯವಾಗಿದೆ. ಚರ್ಚೆಗಾಗಿ ಒಪ್ಪಂದಕ್ಕೆ ಬರುವ ಮೂಲಕ ಮತ್ತು ಸಮಯ ಮತ್ತು ದಿನಾಂಕವನ್ನು ಅಂತಿಮಗೊಳಿಸುವುದರ ಮೂಲಕ ಈ ವಿಷಯವನ್ನು ಇತ್ಯರ್ಥಪಡಿಸಿರುವುದರಿಂದ, ಸರ್ಕಾರವು ಅತ್ಯಂತ ರಚನಾತ್ಮಕ ಚರ್ಚೆಯನ್ನು ಎದುರು ನೋಡುತ್ತಿದೆ ಎಂದು ಅವರು ತಿಳಿಸಿದರು.

**<>><><*><><<>**

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದು ಮಧ್ಯಾಹ್ನ ತಿರುವನಂತಪುರಂಗೆ ತೆರಳಲಿದ್ದು, ನೌಕಾಪಡೆಯ ಕಾರ್ಯಾಚರಣೆ ಪ್ರದರ್ಶನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.  ಶಂಗುಮುಖಂ ಕಡಲತೀರದಲ್ಲಿ ಭಾರತೀಯ ನೌಕಾಪಡೆಯ ಪ್ರದರ್ಶನ ನಡೆಯಲಿದ್ದು, ಈ ವೇಳೆ ಎಂ.ಹೆಚ್.೬೦ಆರ್ ಹೆಲಿಕಾಪ್ಟರ್ ಶಂಗುಕುಖಂನಲ್ಲಿ ರಾಷ್ಟ್ರಪತಿಗಳಿಗೆ ಭವ್ಯ ಗೌರವ ಸಲ್ಲಿಸಲಿದೆ. ಕಾರ್ಯಾಚರಣೆ ಪ್ರದರ್ಶನವು ನೌಕಾಪಡೆಯ ಶಕ್ತಿ ಮತ್ತು ಯುದ್ಧ ಸನ್ನದ್ಧತೆಯನ್ನು ಪ್ರದರ್ಶಿಸುತದೆ, ಇದರಲ್ಲಿ ೧೯ ಪ್ರಮುಖ ಯುದ್ಧನೌಕೆಗಳು ಮತ್ತು ಯುದ್ಧ ವಿಮಾನಗಳು ಮತ್ತು ಕಣ್ಗಾವಲು ವಿಮಾನಗಳು ಸೇರಿದಂತೆ ೩೨ ವಿಮಾನಗಳಿವೆ. ಕಾರ್ಯಕ್ರಮದ ನಂತರ, ರಾಷ್ಟ್ರಪತಿಗಳು ಲೋಕ ಭವನಕ್ಕೆ ತೆರಳಲಿದ್ದಾರೆ.

**<>><><*><><<>**

ಪ್ರಧಾನಿ ನರೇಂದ್ರ ಮೋದಿ ಅವರು ನಿನ್ನೆ ಪ್ರಧಾನ ಮಂತ್ರಿ ಕಚೇರಿಯನ್ನು ಸೇವಾ ತೀರ್ಥ ಎಂದು ಮರುನಾಮಕರಣ ಮಾಡಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈ ವಿಷಯ ಕುರಿತಾಗಿ, ರಾಜಭವನ ಮತ್ತು ರಾಜ ನಿವಾಸಗಳ ಹೆಸರುಗಳನ್ನು ಲೋಕ ಭವನ ಮತ್ತು ಲೋಕ ನಿವಾಸ್ ಎಂದು ಬದಲಾಯಿಸಲಾಗುತ್ತಿದೆ ಎಂದು ಉಲ್ಲೇಖಿಸಿದ್ದಾರೆ.  ಸೇವೆ ಮತ್ತು ಉತ್ತಮ ಆಡಳಿತವನ್ನು ಪ್ರಮುಖ ಆದ್ಯತೆಗಳನ್ನಾಗಿ ಇಟ್ಟುಕೊಂಡು ಅಭಿವೃದ್ಧಿ ಹೊಂದಿದ ಮತ್ತು ಶ್ರೇಷ್ಠ ಭಾರತವನ್ನು ನಿರ್ಮಿಸುವ ಪಯಣದಲ್ಲಿ ಇದು ಒಂದು ಪ್ರಮುಖ ಮೈಲಿಗಲ್ಲಾಗಿದೆ ಎಂದು ಬಣ್ಣಿಸಿದ್ದಾರೆ.  ಕಳೆದ ೧೧ ವರ್ಷಗಳಲ್ಲಿ, ಪ್ರಧಾನಿ ನರೇಂದ್ರ ಮೋದಿ ಸರ್ಕಾರವು ಅಧಿಕಾರಕ್ಕಿಂತ ಹೆಚ್ಚಾಗಿ ಸೇವೆಗೆ ಒತ್ತು ನೀಡಿದ್ದು, ತಮ್ಮನ್ನು ಪ್ರಧಾನ ಸೇವಕ ಎಂದು ಪರಿಗಣಿಸಿ ಜನರಿಗಾಗಿ ಕೆಲಸ ಮಾಡುತಿದ್ದಾರೆ ಎಂದು ಗೃಹ ಸಚಿವರು ತಿಳಿಸಿದ್ದಾರೆ.

**<>><><*><><<>**

ನವೆಂಬರ್ ೧೦ ರಂದು ಕೆಂಪು ಕೋಟೆಯ ಬಳಿ ನಡೆದ ಕಾರು ಸ್ಫೋಟದಲ್ಲಿ ೧೫ ಜನರ ಸಾವಿಗೆ ಕಾರಣವಾದ ಪ್ರಕರಣದ ವಿಚಾರಣೆ ಮತ್ತು ಇತರ ವಿಷಯಗಳಿಗಾಗಿ ಕೇಂದ್ರ ಗೃಹ ಸಚಿವಾಲಯವು, ಹಿರಿಯ ವಕೀಲ ಮಾಧವ್ ಖುರಾನಾ ಅವರನ್ನು ವಿಶೇಷ ಸಾರ್ವಜನಿಕ ಅಭಿಯೋಜಕರನ್ನಾಗಿ ನೇಮಿಸಿದೆ. ಸರ್ಕಾರಿ ಆದೇಶದ ಅನ್ವಯ, ಎನ್ಐಎ ವಿಶೇಷ ನ್ಯಾಯಾಲಯ ಮತ್ತು ದೆಹಲಿ ಹೈಕೋರ್ಟ್ ಎದುರು ವಿಚಾರಣೆ ಮತ್ತು ಇತರ ಕಾನೂನು ವಿಷಯಗಳನ್ನು ನಡೆಸಲು ರಾಷ್ಟ್ರೀಯ ತನಿಖಾ ಸಂಸ್ಥೆಯ ಪರವಾಗಿ ಖುರಾನಾ ಅವರನ್ನು ಮೂರು ವರ್ಷಗಳ ಕಾಲ ವಿಶೇಷ ಸಾರ್ವಜನಿಕ ಅಭಿಯೋಜಕರನ್ನಾಗಿ ನೇಮಿಸಲಾಗಿದೆ.

**<>><><*><><<>**

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ- ಡಿಆರ್‌ಡಿಓ ನಿನ್ನೆ ಚಂಡೀಗಢದಲ್ಲಿ ನಿಯಂತ್ರಿತ ವೇಗದಲ್ಲಿ ಯುದ್ಧ ವಿಮಾನ ಎಸ್ಕೇಪ್ ವ್ಯವಸ್ಥೆಯ ಯಶಸ್ವಿ ಹೈ-ಸ್ಪೀಡ್ ರಾಕೆಟ್-ಸ್ಲೆಡ್ ಪರೀಕ್ಷೆಯನ್ನು ನಡೆಸಿತು. ಈ ಪರೀಕ್ಷೆಯು ಕ್ಯಾನೋಪಿ ಸೆವೆರೆನ್ಸ್, ಎಜೆಕ್ಷನ್ ಸೀಕ್ವೆನ್ಸಿಂಗ್ ಮತ್ತು ಸಂಪೂರ್ಣ ಏರ್‌ಕ್ರೂ-ರಿಕವರಿಯನ್ನು ಮಾನ್ಯ ಮಾಡಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಸಂಕೀರ್ಣ ಕ್ರಿಯಾತ್ಮಕ ಪರೀಕ್ಷೆಯು ಭಾರತವನ್ನು ಸುಧಾರಿತ ಇನ್-ಹೌಸ್ ಎಸ್ಕೇಪ್ ವ್ಯವಸ್ಥೆಯ ಪರೀಕ್ಷಾ ಸಾಮರ್ಥ್ಯವನ್ನು ಹೊಂದಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಇರಿಸಿದೆ ಎಂದು ಹೇಳಲಾಗಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಯಶಸ್ವಿ ಪರೀಕ್ಷೆಯ ಬಗ್ಗೆ ಭಾರತೀಯ ವಾಯುಪಡೆ, ಡಿಆರ್‌ಡಿಓ ಮತ್ತು ಉದ್ಯಮವನ್ನು ಶ್ಲಾಘಿಸಿದ್ದಾರೆ. ಸ್ವಾವಲಂಬನೆಯ ಪಥದಲ್ಲಿ ಭಾರತದ ಸ್ಥಳೀಯ ರಕ್ಷಣಾ ಸಾಮರ್ಥ್ಯಕ್ಕೆ ಇದು ಮಹತ್ವದ ಮೈಲಿಗಲ್ಲು ಎಂದು ಅವರು ಬಣ್ಣಿಸಿದ್ದಾರೆ.

**<>><><*><><<>**

ಭಾರತೀಯ ವಾಯುಪಡೆಯ ಸಿ-೧೭ ಸಾರಿಗೆ ವಿಮಾನವು, ಸ್ವಯಂ ಚಾಲಿತ ಮಾಡ್ಯುಲರ್ ಫೀಲ್ಡ್ ಆಸ್ಪತ್ರೆ, ೭೦ ಕ್ಕೂ ಹೆಚ್ಚು ವೈದ್ಯಕೀಯ ಮತ್ತು ಸಹಾಯಕ ಸಿಬ್ಬಂದಿ ಮತ್ತು ಅಗತ್ಯ ವಾಹನಗಳನ್ನು ಇಂದು ಕೊಲಂಬೊಗೆ ತಲುಪಿಸಿದೆ ಎಂದು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ಭಾರತವು ಶ್ರೀಲಂಕಾದ ಪ್ರವಾಹ ಪರಿಹಾರ ಪ್ರಯತ್ನಗಳಿಗೆ ಬೆಂಬಲ ನೀಡುವುದನ್ನು ಮುಂದುವರೆಸಿದೆ ಎಂದು ಹೇಳಿದ್ದಾರೆ.

**<>><><*><><<>**

೨೦೨೫ ರ ಅಂತಾರಾಷ್ಟ್ರೀಯ ವಿಶೇಷಚೇತನರ ದಿನದ ಸಂದರ್ಭದಲ್ಲಿ, ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನವದೆಹಲಿಯಲ್ಲಿ ವಿಶೇಷಚೇತನರ ಸಬಲೀಕರಣದಲ್ಲಿ ಅನುಕರಣೀಯ ಪ್ರಯತ್ನಕ್ಕಾಗಿ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ರಾಷ್ಟ್ರೀಯ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ.

**<>><><*><><<>**

ರಾಷ್ಟ್ರೀಯ ಹೆದ್ದಾರಿಗಳಲ್ಲಿ ದೂರಸಂಪರ್ಕ ಆಧಾರಿತ ಸುರಕ್ಷತಾ ಎಚ್ಚರಿಕೆ ವ್ಯವಸ್ಥೆಗಳನ್ನು ನಿಯೋಜಿಸಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಎನ್‌ಎಚ್‌ಎಐ, ರಿಲಯನ್ಸ್ ಜಿಯೋ ಜೊತೆ ಒಪ್ಪಂದಕ್ಕೆ ಸಹಿ ಹಾಕಿದೆ. ರಾಷ್ಟ್ರೀಯ ಹೆದ್ದಾರಿ ಬಳಕೆದಾರರಿಗೆ ಸಮಯೋಚಿತ ಮಾಹಿತಿಯನ್ನು ಒದಗಿಸುವ ಮೂಲಕ ರಸ್ತೆ ಸುರಕ್ಷತೆಯನ್ನು ಬಲಪಡಿಸುವ ಗುರಿಯನ್ನು ಈ ಉಪಕ್ರಮವು ಹೊಂದಿದೆ, ಇದರಿಂದಾಗಿ ಅವರು ವೇಗ ಮತ್ತು ಚಾಲನಾ ನಡವಳಿಕೆಯನ್ನು ಮುಂಚಿತವಾಗಿ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ತಿಳಿಸಿದೆ.

**<>><><*><><<>**

ತಮಿಳುನಾಡಿನ ಮಧುರೈ ಹಾಕಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಎಫ್‌ಐಎಚ್ ಕಿರಿಯರ ಪುರುಷರ ಹಾಕಿ ವಿಶ್ವಕಪ್-೨೦೨೫ರ ಕ್ವಾರ್ಟರ್ ಫೈನಲ್‌ಗೆ ಭಾರತ ಅರ್ಹತೆ ಗಳಿಸಿದೆ. ನಿನ್ನೆ ನಡೆದ ಪಂದ್ಯದಲ್ಲಿ ಭಾರತ ತಂಡ, ಸ್ವಿಟ್ಜರ್‌ಲ್ಯಾಂಡ್ ವಿರುದ್ಧ ೫-೦ ಅಂತರದಿಂದ ಜಯ ಸಾಧಿಸಿ, ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟಿತು. ಭಾರತದ ಪರ ಮನ್ಮೀತ್, ಶಾರದಾನಂದ್ ತಿವಾರಿ ಮತ್ತು ಅರ್ಷ್‌ದೀಪ್ ಸಿಂಗ್ ಗೋಲು ಗಳಿಸಿದರು. ಆಡಿದ ಮೂರು ಪಂದ್ಯಗಳಲ್ಲಿ ಅಜೇಯವಾಗಿ ಉಳಿದು ೯ ಅಂಕಗಳನ್ನು ಕಲೆಹಾಕಿ ಭಾರತ ತಂಡ, ಬಿ ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ. ರೋಹಿತ್ ನೇತೃತ್ವದ ಭಾರತ ತಂಡ, ಇದೇ ೫ ರಂದು ನಡೆಯಲಿರುವ ಕ್ವಾರ್ಟರ್ ಫೈನಲ್‌ನಲ್ಲಿ ಬೆಲ್ಜಿಯಂ ತಂಡವನ್ನು ಎದುರಿಸಲಿದೆ. ಭಾರತ ಈವರೆಗೆ ಎರಡು ಬಾರಿ ಕಿರಿಯರ ಹಾಕಿ ವಿಶ್ವಕಪ್ ಗೆದ್ದಿದೆ. ಮಹಿಳಾ ಹಾಕಿಯಲ್ಲಿ ಚಿಲಿಯ ಸ್ಯಾಂಟಿಯಾಗೊದಲ್ಲಿ ನಡೆಯಲಿರುವ ಎಫ್‌ಐಎಚ್ ಕಿರಿಯರ ಹಾಕಿ ವಿಶ್ವಕಪ್‌ನ ತಮ್ಮ ಎರಡನೇ ಗುಂಪು ಹಂತದ ಪಂದ್ಯದಲ್ಲಿ ಭಾರತೀಯ ಮಹಿಳಾ ತಂಡ ಜರ್ಮನಿಯನ್ನು ಎದುರಿಸಲಿದೆ. ಪಂದ್ಯ ಇಂದು ರಾತ್ರಿ ೭.೪೫ ಕ್ಕೆ ಆರಂಭವಾಗಲಿದೆ. ಪ್ರಸ್ತುತ ಭಾರತೀಯ ಮಹಿಳಾ ತಂಡ, ಸಿ ಗುಂಪಿನ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>**